# ಬದಲಾವಣೆಗಾಗಿ ಸೆಕ್ಸ್ ವರ್ಕರ್ಸ್ ಸಂಘಟಿತರಾಗುವುದು– ವಾಂಪ್ ಅನುಭವ

## ಎಗ್ಸಿಕ್ಯುಟಿವ್ ಸಾರಾಂಶ


ಈ ಪೇಪರ್ ಥೈಲ್ಯಾಂಡ್ ಮೂಲದ GAATW ಯೆಂಬ ಸಂಘಟನೆಯು ಏಳು ದೇಶಗಳಲ್ಲಿ "ಬದಲಾವಣೆಗಾಗಿ ಸೆಕ್ಸ್ ವರ್ಕರ್ಸ್ ಸಂಘಟಿತರಾಗುವುದು: ಸ್ವಯಂಪ್ರಾತಿನಿಧ್ಯ, ಸಮುದಾಯ ಸಂಘಟನೆ ಮತ್ತು ಕೆಲಸದ ಸ್ಥಿತಿ-ಗತಿಗಳು"ಯೆಂಬ ವಿಷಯದ ಮೇಲೆ ಅಧ್ಯಯನ ನಡೆಸಿದ್ದು , ಅದರಲ್ಲಿನ ಒಂದು ಅಧ್ಯಾಯ ಭಾರತದಲ್ಲಿ ನಡೆದದ್ದನ್ನು ಒಳಗೊಂಡಿದೆ. ಹೇಗೆ ಸೆಕ್ಸ್ ವರ್ಕರ್ಸ್ ಸ್ವಯಂ- ಸಂಘಟಿತರಾಗಿ ಸಮೂಹವನ್ನು ಮತ್ತು ಯೂನಿಯನ್ ಕಟ್ಟಿಕೊಂಡು, ತಮ್ಮ ಸಾಮಾಜಿಕ-ರಾಜಕೀಯ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಸಾಗಾಣಿಕೆಯನ್ನು ಅರ್ಥ ಮಾಡಿಕೊಂಡು ಮತ್ತು ಆ ಸಮಸ್ಯೆಗೆ ಸ್ಪಂದಿಸುತ್ತಿರುವ ರೀತಿಯನ್ನು ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಿದೆ.

ಈ ಮೈಕ್ರೋ ಕೇಸ್ ಸ್ಟಡಿಯು ಮಹಾರಾಷ್ಟ್ರ ದಲ್ಲಿ ಸ್ಥಿತಗೊಂಡಿರುವ VAMPಯೆಂಬ ಸ್ವತಂತ್ರ ಸೆಕ್ಸ್ ವರ್ಕರ್ಸ್ ಸಮೂಹವು, ಭಾರತ ದೇಶದಲ್ಲಿ ದಂಧೆ/ಸೆಕ್ಸ್ ವರ್ಕ್ ಮತ್ತು ಸಾಗಾಣಿಕೆಯ ಸಂಕೀರ್ಣ ಇತಿಹಾಸ ಮತ್ತು ವಾಸ್ತವಾಂಶಗಳನ್ನು ಅನಾವರಣ ಮಾಡುವ ಸಂದರ್ಭೋಚಿತ ಅಧ್ಯಯನದ ಪ್ರಯತ್ನವಾಗಿದೆ. ಸಾಮಾನ್ಯವಾಗಿ ಈ ಕಾನೂನು ಮತ್ತು ನೈತಿಕ ಆಡಳಿತ ಕ್ರಮವು ಸೆಕ್ಸ್ ವರ್ಕ್ ಮತ್ತು ಸಾಗಾಣಿಕೆಯನ್ನು ಸಮನ್ವಯ ಮಾಡಿ ನೋಡುವ ಪರಿಕ್ರಮದಿಂದಾಗಿ ಸೆಕ್ಸ್ ವರ್ಕರ್ಸ್ ಗಳ ಮೇಲಾಗುವ ಪರಿಣಾಮ; ಮತ್ತು ಇದರಿಂದಾಗಿ ಇವರುಗಳು ಈ ಉದ್ಯಮದ ಒಳಗಡೆ ಆಗುವ ದೌರ್ಜನ್ಯ, ಶೋಷಣೆಗೆ ಸ್ಪಂದಿಸುವ ಬಗೆ, ಅರ್ಥೈಸುವಿಕೆ, ವ್ಯಾಖ್ಯಾನಗಳು ವಿಕಸಿತವಾದ ಬಗೆ ; ಮತ್ತು ಸಮಾಜ, ಪೋಲಿಸ್ ಮತ್ತು ಸಾಗಾಣಿಕೆ- ವಿರುದ್ದ ಕೆಲಸ ಮಾಡುವ ಸಂಸ್ಥೆಗಳು ಸೆಕ್ಸ್ ವರ್ಕರ್ಸ್ ಗಳನ್ನು ಕಳಂಕಿತರನ್ನಾಗಿ ಮಾಡುವುದು ಮತ್ತು ಅಪರಾಧೀಕರಣದೆಡೆಗೆ ಅವರನ್ನು ದೂಡುವುದು ಎಂಬೆಲ್ಲ ಅಂಶಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದೆ.

ಈ ಅಧ್ಯಯನವು VAMPನ ಬಹುಸ್ತರದ ವಿಧಾನದ ಮೂಲಕ ಸೆಕ್ಸ್ ವರ್ಕರ್ಸ್ ಗಳ ಹಕ್ಕುಗಳನ್ನು ಒಳಗೊಂಡಂತೆ, ಸಮುದಾಯದ ಒಳಗಡೆ ಉದ್ಭವಿಸುವ ದೌರ್ಜನ್ಯ ಮತ್ತು ಘರ್ಷಣೆಗಳನ್ನು ಉದ್ದೇಶಿಸುವ 'ತಂಟ ಮುಕ್ತಿ ಸಮಿತಿ-TMS (ಘರ್ಷಣೆಗಳನ್ನು ಪರಿಹರಿಸುವ ಸಮಿತಿ)'ಯ ಕಾರ್ಯ ವಿಧಾನ, ಸಾಗಾಣಿಕೆಯ ಸಮಸ್ಯೆಗಳು; 'ಮಿತ್ರ'-ಸೆಕ್ಸ್ ವರ್ಕರ್ಸ್ ಮತ್ತವರ ಮಕ್ಕಳಿಗೆ ಶಿಕ್ಷಣ ಮತ್ತು ಸಶಕ್ತಿಕರಣದ ಕೆಲಸ ಮಾಡುವಲ್ಲಿ ನಿರತವಾಗಿರುವುದನ್ನು ಒಳಗೊಂಡಿದೆ.


### VAMP (ವಾಂಪ್) ಮತ್ತು SANGRAM (ಸಂಗ್ರಾಮ್) ಕುರಿತು

ಮೊದಲು 'ವೇಶ್ಯ ಏಡ್ಸ್ ಮುಕಾಬಲಾ ಪರಿಷದ್' ಯೆಂದು ಕರೆಯಲ್ಪಡುತ್ತಿದ್ದು, 1998 ನಂತರ 'ವೇಶ್ಯ ಅನ್ಯಾಯ್ ಮುಕ್ತಿ ಪರಿಷದ್' ಯೆಂದು ಹೆಸರು ಬದಲಾವಣೆ ಗೊಂಡಿತು. ಅವರುಗಳೇ ತಮ್ಮ ಪ್ರಾರಂಭದ ದಿನಗಳ ಬಗ್ಗೆ ವಿಶ್ಲೇಷಣೆ ಮಾಡುತ್ತಾ ಹೇಳುತ್ತಾರೆ, ಇದು ತಮ್ಮ ಸಾಮೂಹಿಕ ಪ್ರಯಾಣದಲ್ಲಿ ಒಂದು ಬಹು ಮುಖ್ಯ ಘಟ್ಟ ಯಾಕೆಂದರೆ ಏಡ್ಸ್ ವಿರುದ್ದದ ತಮ್ಮ ಸಂಘರ್ಷದಿಂದ ವಿಸ್ತೃತಗೊಂಡು ಶೋಷಣೆ ಮತ್ತು ಅನ್ಯಾಯದಿಂದ ವಿಮೋಚನೆ ಪಡೆಯುವಲ್ಲಿ ಚಳುವಳಿ ಕಟ್ಟಲು ನಿರತವಾಯಿತು.

ಸಂಗ್ರಾಮ್ (SANGRAM) ನ ನೇತೃತ್ವದಲ್ಲಿ ಪ್ರಾರಂಭಗೊಂಡ ವಾಂಪ್ (VAMP) 1992 ರಿಂದ ಕೆಲಸ ಮಾಡಲು ಪ್ರಾರಂಭಿಸಿತು, ಸೆಕ್ಸ್ ವರ್ಕ್ ನಲ್ಲಿ ತೊಡಗಿರುವ ಮಹಿಳೆಯರ ಮೇಲೆ ಏಡ್ಸ್ ಪಿಡುಗು ಅವರನ್ನು ನಿಷ್ಕರುಣೆಯಿಂದ ಸಂಪೂರ್ಣ ಆವರಿಸಿಕೊಂಡಾಗ ಮತ್ತು ಏಡ್ಸ್ ಗೆ ತುತ್ತಾಗಲು ಹೆಚ್ಚಿನ ಅಪಾಯದಲ್ಲಿರುವ ಈ ಮಹಿಳೆಯರ ಗುಂಪನ್ನು ಗುರುತಿಸುವುದು ಮುಖ್ಯ ಕೆಲಸವಾಗಿತ್ತು. ಮುಂಬೈ ನಂತರ ಅತೀ ಹೆಚ್ಚು HIV/ಏಡ್ಸ್ ಗೆ ಪೀಡಿತರಾದದ್ದು ಮಹಾರಾಷ್ಟ್ರದ, ಸಾಂಗ್ಲಿ ಯೆಂಬ ಜಿಲ್ಲೆಯಲ್ಲಿ. ಇಲ್ಲಿಂದ ಪ್ರಾರಂಭಗೊಂಡು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ಮತ್ತು ಕರ್ನಾಟಕವನ್ನು ಒಳಗೊಂಡಂತೆ ಗ್ರಾಮೀಣ ಮತ್ತು ಮುಸ್ಲಿಂ ಮಹಿಳೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು ಕೂಡ ಈ ಪರಿಧಿಯಲ್ಲಿ ಸೇರ್ಪಡೆಯಾದರು.

**ಸಂಶೋಧನಾ ವಿಧಾನ**

ಇಲ್ಲಿ ಪ್ರಾಥಮಿಕವಾಗಿ ಅನುಸರಿಸಿದ ವಿಧಾನವೆಂದರೆ 'ಸ್ತ್ರೀವಾದಿ ಪಾಲ್ಗೊಳ್ಳುವಿಕೆಯ ಕ್ರಿಯಾ ಸಂಶೋಧನೆಯ ತತ್ತ್ವಗಳು', ವಾಂಪ್ (VAMP) ಅನ್ನು ಸಾಗಾಣಿಕೆಯೊಟ್ಟಿಗೆ ಸಮನ್ವಯ ಮಾಡಿ ನೋಡುವ ಪರಿ, ಕೆಲಸದ ವಿವಿಧ ಆಯಾಮವನ್ನು ಕ್ರೋಡಿಕರಿಸುವುದು, ವಲಸೆ ಮತ್ತು ಸೆಕ್ಸ್, ಸಮುದಾಯದೊಳಗಡೆ ಕೇಂದ್ರಿಕೃತ ಗುಂಪು ಚರ್ಚೆ, ವೈಯಕ್ತಿಕ ಸಂದರ್ಶನ ಮತ್ತು ಕ್ಷೇತ್ರ ಭೇಟಿ.

ಸಂಶೋಧನೆಯ ಭಾಗವಾಗಿ ಸಮುದಾಯದೊಟ್ಟಿಗೆ ಯೋಜನೆ ತಯಾರುಮಾಡಿ ಈ ಕೆಳಕಂಡಂತೆ ಕಾರ್ಯಗತಗೊಳಿಸಲಾಗಿದೆ:

1. ಸಂದರ್ಶನಗಳು, ವೀಡಿಯೊ ರೆಕಾರ್ಡಿಂಗ್, ಕಿರುಹೊತ್ತಿಗೆಗಳ ಮೂಲಕ ದಾಖಲಿಸುವುದು, ಸಾಗಾಣಿಕೆಯ ಮೇಲೆ ಮೂರು ಕೇಸ್ ಸ್ಟಡಿ (ಉದಾಹರಣಾ ಪರಿಶೀಲನೆ) ಮತ್ತು ಅದರಿಂದ ಹೊರಬಂದ ಅಂಶ/ಸಮಸ್ಯೆಗಳನ್ನು ಹೇಗೆ ನಿಭಾಯಿಸಿದರೆಂದು:
   -ನೇಪಾಳದಿಂದ ಸಾಗಣೆಯಾದ ಮಹಿಳೆಯನ್ನು ವಾಂಪ್ (VAMP) ಮೂಲಕ ಮತ್ತೆ ಅವಳ ಕುಟುಂಬದೊಟ್ಟಿಗೆ ಸೇರಿಸಿದ್ದು
   --ಬಾಂಗ್ಲಾದೇಶದಿಂದ ಸಾಗಣೆಯಾದ ಮಹಿಳೆ
   -ರಾಜಸ್ಥಾನದಿಂದ ಸಾಗಣೆಯಾದ ಅಪ್ರಾಪ್ತ ಹುಡುಗಿ

2. USAID ಅನುದಾನ ನೀಡಲು 'ವೇಶ್ಯಾವಾಟಿಕೆ ವಿರೋಧಿ ನಿಷ್ಠೆಯ ಪ್ರಮಾಣ ಪತ್ರ (Anti prostitution Loyalty Oath (APLO), ಸಾಮಾನ್ಯವಾಗಿ ಬಳಸುವ 'ವೇಶ್ಯಾವಾಟಿಕೆ ಪ್ರತಿಜ್ಞೆ' ಪತ್ರದ ಮೇಲೆ ಸಹಿ ಮಾಡಲು ವಾಂಪ್ (VAMP) ನಿರಾಕರಿಸಿದಾಗ, ಈ ಸಂಘಟನೆಯ ಮೇಲೆ 2005 ರಲ್ಲಿ 'ದಾಳಿ ಮತ್ತು ಕಾಪಾಡುವುದು' (ರೆಸ್ಕ್ಯೂ) ಮಾಡಿದನ್ನು ದಾಖಲಿಸುವುದು.

3. ಗೋಕುಲ್ನಗರ್ ಮತ್ತು ಮಿರಾಜ್ ಸಮುದಾಯದ ಮೇಲಾದ ದಾಳಿ ಮತ್ತು 'ತಂಟ ಮುಕ್ತಿ ಸಮಿತಿ'-TMS ಗಳೊಟ್ಟಿಗೆ ಕ್ರಮವಾಗಿ ಎರಡು ಕೇಂದ್ರಿತ ಗುಂಪು ಚರ್ಚೆ ನಡೆಸುವುದು

4. ತಾವುಗಳು ಸಂಘಟನೆ ಒಳಗಡೆ/ಹೊರಗಿನಿಂದ ಬಂದಂತಹ ಹಿಂಸೆ ಅಥವಾ ಗುರುತಿಸಿದಂತಹ ಸಾಗಾಣಿಕೆಯ ಸಮಸ್ಯೆಯ ಪರಿಹಾರ ಮಾಡಿಕೊಳ್ಳಬೇಕಾದರೆ ಅಥವಾ ತಮ್ಮಗಳ ಮೇಲೆ ತಪ್ಪು ಸಾಗಾಣಿಕೆಯ ಕೇಸುಗಳನ್ನು ದಾಖಲಿಸಿದಾಗ, ಸಹಾಯಕ್ಕಾಗಿ ಭೇಟಿ ಮಾಡಿದಂತಹ ಸಂಘಟನೆಗಳು ಮತ್ತು ವ್ಯಕ್ತಿಗಳು-ಇವರುಗಳು ಉಪ ಪೋಲಿಸ್ ಅಧೀಕ್ಷಕ, ಜಿಲ್ಲಾ ನ್ಯಾಯಾಂಗ ಸೇವಾ ಪ್ರತಿನಿಧಿಗಳು, ಮತ್ತು ಹಿರಿಯ ವಕೀಲರನ್ನು ಒಳಗೊಂಡಂತೆ

5. ಕರ್ನಾಟಕ-ಮಹಾರಾಷ್ಟ್ರ ಗಡಿಯಲ್ಲಿ ಇರುವ ನೆರೆ ಜಿಲ್ಲೆಯಾದ 'ಮಹಾಲಿಂಗಪುರ'ಕ್ಕೆ ಭೇಟಿ. ಇದು ಹೆಚ್ಚಾಗಿ ದೇವದಾಸಿಯರು ಇರುವ ತಾಣ

6. ಬೇರೆ ಬೇರೆ ಸಮುದಾಯದಲ್ಲಿ ಇರುವ ಸೆಕ್ಸ್ ವರ್ಕರ್ಸ್ ಒಟ್ಟಿಗೆ ವೈಯಕ್ತಿಕ ಸಂದರ್ಶನ, 'ಮಿತ್ರ' ಪ್ರತಿನಿಧಿಯೊಟ್ಟಿಗೆ, ಸಂಗ್ರಾಮ್ ನ ಪ್ರತಿನಿಧಿಗಳಾದ ಮೀನಾ ಸೇಷು ಮತ್ತು ಆರತಿ ಪೈ ಅವರೊಟ್ಟಿಗೆ ಸಂದರ್ಶನ

**ಸಾಮಾಜಿಕ-ರಾಜಕೀಯ ಸನ್ನಿವೇಶ**

ಅಧ್ಯಯನದ ಮೊದಲನೆಯ ಭಾಗದಲ್ಲಿ ಸೆಕ್ಸ್ ವರ್ಕ್ ಅನ್ನು ಅರ್ಥಮಾಡಿಕೊಳ್ಳುವುದು, ನಿರ್ದಿಷ್ಟವಾಗಿ ಹೇಳಬೇಕೆಂದರೆ ಭಾರತ ದೇಶದ ಐತಿಹಾಸಕ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯದ ಸನ್ನಿವೇಶದಲ್ಲಿ, ಭಿನ್ನ ಸಂಸ್ಕೃತಿಗಳ ನಾಡು, ವೈವಿಧ್ಯತೆಯ ವಾಸ್ತವಾಂಶ, ಇತಿಹಾಸ ಮತ್ತು ಆರ್ಥಿಕತೆ. ಸೆಕ್ಸ್ ವರ್ಕ್/ವೇಶ್ಯ ವ್ಯವಸಾಯ/ದಂಧೆ ಎಂದೆಲ್ಲ ಸಾಮಾನ್ಯವಾಗಿ ಕರೆಯಲ್ಪಡುವ ಸಾಂಸ್ಥಿಕ ವ್ಯವಸ್ಥೆಯು ಸಹ, ಇವೆ ವೈವಿಧ್ಯತೆಯಿಂದ ಕೂಡಿದ ಭಿನ್ನ ಸ್ವರೂಪಗಳಾದ ಜೆಂಡರ್, ಧರ್ಮ, ಜಾತಿ, ವರ್ಗ, ಕಲೆಯನ್ನು ಒಳಗೊಂಡ ತನ್ನ ಹಲವಾರು ಐತಿಹಾಸಕ ಸ್ವರೂಪ ಪಡೆದುಕೊಂಡಿದೆ. ಈ ಬಹುತ್ವಕ್ಕೆ , ಎಷ್ಟೋ ಸಂಕೀರ್ಣ ವಾಸ್ತವಿಕತೆ ಇದ್ದರೂ ಇದನ್ನು ವ್ಯವಸ್ಥಿತವಾಗಿ ಏಕರೂಪತೆಯ ಅಡಿಯಲ್ಲಿ ತರಲು ವಸಾಹತುಶಾಹಿ, ನಗರೀಕರಣ ಮತ್ತು ಜಾಗತೀಕರಣದ ಪ್ರಭಾವ ಒಂದೆಡೆಯಾದರೆ, ಇನ್ನೊಂದೆಡೆ ಪ್ರಬಲ ಶಾಶನ, ಕಾನೂನು, ಸಂಸ್ಕೃತಿ ಮತ್ತು ನೈತಿಕ ಆಳ್ವಿಕೆಯು ಇವೆಲ್ಲವನ್ನು ಅಪರಾಧೀಕರಣ, ಕಳಂಕ ಮತ್ತು ಬೆಲೆಇಲ್ಲದಹಾಗೆ ಮಾಡಲಿಕ್ಕೆ ಹೊರಟಿರುವ ಅಂಶಗಳ ಬಗ್ಗೆ ಒಂದು ಸ್ಥೂಲ ಚಿತ್ರಣ ನೀಡುವುದಾಗಿದೆ. ವಸಾಹತುಶಾಹಿಯ ಗ್ರಹಿಕೆಯ ಪ್ರಕಾರ ವೇಶ್ಯಾವಾಟಿಕೆಯು ಒಂದು 'ಅವಶ್ಯಕ ಕೆಡುಕು' ಯೆಂದು ಸಮಾಜಾಯಿಷಿ ನೀಡಿ, ಇದನ್ನು ನಿಯಂತ್ರಣ ಮಾಡಬೇಕೆಂದು ಮತ್ತು ಈ ಮಹಿಳೆಯರು 'ಅನಪೇಕ್ಷಿತ' ರೆಂದು ಕರೆದು, ಇವರನ್ನು ಸುಧಾರಣೆ ಮಾಡಬೇಕು ಇಲ್ಲದಿದ್ದರೆ ಇವರು ಸಮಾಜದ ಸ್ವಾಸ್ಥ್ಯ ಮತ್ತು ನೈರ್ಮಲ್ಯಕ್ಕೆ ಹಾನಿಕಾರಕವೆಂದು ತರ್ಕ ಸಿದ್ದಪಡಿಸಿ, ಒಂದು ಅಸ್ಪಷ್ಟವಾದ 'ಸಪ್ರೆಶನ್ ಆಫ್ ಇಮ್ಮೊರಲ್ ಟ್ರಾಫಿಕ್ಕಿಂಗ್ ಆಕ್ಟ್' ಗೆ ಬುನಾದಿ ಹಾಕಿದ್ದು, ಇದು ಇಂದಿನ ಸೆಕ್ಸ್ ವರ್ಕ್ ಮತ್ತು ಸಾಗಾಣಿಕೆಯನ್ನು ನ್ಯಾಯಶಾಸ್ತ್ರವು ಒಪ್ಪಿ ಕಾರ್ಯ ಪ್ರವೃತ್ತರಾಗಿರುವುದರ ಜಾಡನ್ನು ಹಿಡಿಯಲು ಹೊರಟಿದೆ. ಕಾನೂನಿನನ್ವಯ ಸೆಕ್ಸ್ ವರ್ಕ್ ಅಪರಾಧವಲ್ಲದಿದ್ದರೂ, ಇದನ್ನು ಸಮಾಜ ಮತ್ತು ಕಾನೂನು ಹೆಚ್ಚೆಚ್ಚು ಸಾಗಾಣಿಕೆಯ ಪರಿಭಾಷೆಯಾದ 'ವಸ್ತು ಅಥವಾ ವ್ಯಕ್ತಿಯನ್ನು ಕಾನೂನು ಬಾಹಿರವಾಗಿ ಕೊಳ್ಳುವುದು ಮತ್ತು ಮಾರುವುದು' ಯೆಂದು ಪ್ರತ್ಯೇಕಿಸದ ಹಾಗೆ ಗ್ರಹಿಸಿಕೊಳ್ಳುತ್ತಿದೆ. ಹೀಗೆ ಮಹಿಳೆಯ ಜೀವನೋಪಾಯದ 'ಆಯ್ಕೆಯನ್ನು' ಅಪರಾಧೀಕರಣ ಮಾಡಿ, ಅವರನ್ನು ಅಸುರಕ್ಷಿತ ಚಲನಶೀಲತೆಗೆ ತಳ್ಳಿರುವುದರಿಂದ, ಕಾನೂನು ಅವರನ್ನು ಇನ್ನು ರಾಜ್ಯಂಗದಿಂದ, ಸಾಗಾಣಿಕೆದಾರರಿಂದ ಮತ್ತು ಗೂಂಡಾಗಳಿಂದ ಇನ್ನೂ ಹಿಂಸೆಗೊಳಗಾಗಿ, ದುರ್ಬಲರಾಗುವಂತ ವಾತಾವರಣ ನಿರ್ಮಿಸುತ್ತಿದೆ.

ಈ ಅಧ್ಯಯನದ ಮೂಲಕ ಜಾಗತೀಕರಣದ ಪ್ರಕ್ರಿಯೆಯ ಸಂದರ್ಭೋಚಿತ ನೆಲೆಯಲ್ಲಿ ಸಾಗಾಣಿಕೆಯನ್ನು ನೋಡ ಹೊರಟು, ಇದು ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಬದುಕು ಹಾಗೂ ಜೀವನೋಪಾಯದ ಮೇಲೆ ಬೀರಿರುವ ಋಣಾತ್ಮಕ ಹಾಗು ಧನಾತ್ಮಕ ಪ್ರಭಾವವನ್ನು ನೋಡಹೊರಟಿದೆ. ಇದಕ್ಕೆ ನಿದರ್ಶನ ನೀಡಬೇಕೆಂದರೆ ನಾವು ನಿರ್ದಿಷ್ಟವಾಗಿ ಗ್ರಪ್ರದೇಶ ನೋಡಿದರೆ, ಜಾಗತೀಕರಣವು ಮಹಿಳೆಯರ ಮೇಲೆ ವಿವಿಧ ರೂಪದ ಹಿಂಸೆಯನ್ನು ಬಿಚ್ಚಿಟ್ಟ ರೀತಿಯನ್ನು ನಾವು ಸಂಯುಕ್ತತೆ ಕಳಚಿಕೊಂಡ ಕೃಷಿ-ಜೀವನೋಪಾಯಗಳು, ಬಲವಂತದ ಹೇರಿಕೆಯ ಅಸುರಕ್ಷಿತ ವಲಸೆಗಳು ನಗರದೆಡೆಗೆ, ಮತ್ತು ಅಸಂಘಟಿತ ವಲಯದಲ್ಲಿ ಶೋಷಿತ ಕೆಲಸದ ವಾತಾವರಣಕ್ಕೆ ತಳಕು ಹಾಕಿ ನೋಡಬಹುದು. ಆದರೆ ಇನೊಂದೆದೆ ನೋಡಿದರೆ ಅಂಚಿಗೆ ತಳ್ಳಲ್ಪಟ್ಟ ಜಾತಿಯವರಿಗೆ, ದಲಿತರಿಗೆ, ಅಲ್ಪಸಂಖ್ಯಾತ ಸಮುದಾಯಗಳಿಗೆ ಹಲವಾರು ಅವಕಾಶಗಳು

ತೆರೆಯಲ್ಪಟ್ಟವು, ಚಲನೆ ಹೆಚ್ಚಿಸಿತು , ಆರ್ಥಿಕ ಸ್ವಾವಲಂಬನೆ ಮತ್ತು ತಂತ್ರಜ್ಞಾನ ಹುಟ್ಟುಹಾಕಿದ ಸ್ವಾಯತ್ತತೆಯಿಂದಾಗಿ ಹಿಂದೆಂದೂ ಕಾಣದಂದತಹ ಲೋಕವನ್ನು ತೆರೆದಿಟ್ಟಿತು. ಇಂತಹ ಬದಲಾವಣೆ ಮತ್ತು ಸವಾಲಿನ ಸಂದಿಗ್ಧತೆಯಲ್ಲಿ ನಾವುಗಳು ಅಧ್ಯಯನದ ಮೂಲಕ ಯಾವ ಸಂಕೀರ್ಣ ಅಂಶಗಳು, ವಲಸೆ ಮತ್ತು ಸಾಗಾಣಿಕೆಯೊಟ್ಟಿಗೆ ಮತ್ತು ಸೆಕ್ಸ್ ವರ್ಕ್-ಸಾಗಾಣಿಕೆಯೊಟ್ಟಿಗೆ ಸಮನ್ವಯಗೊಳಿಸಲು ಯತ್ನಿಸುತ್ತಿದೆಯೆಂದು ಪತ್ತೆ ಹಚ್ಚಬಹುದು. ಯಾಕೆಂದರೆ ದುರ್ಬಲ ಸ್ಥಿತಿ ಮತ್ತು 'ಆಯ್ಕೆ' ಒಂದಕ್ಕೊಂದು ಹೆಣೆದು ಕೊಂಡಿರುವ ಅಂಶಗಳಿಂದಾಗಿ ಮಹಿಳೆಯರನ್ನು ವಿವಿಧ ರೂಪದ ದುಡಿಮೆಗೆ ಅಂದರೆ ಸೆಕ್ಸ್ ವರ್ಕ್ ಅನ್ನು ಒಳಗೊಂಡಂತೆ ಮನೆಗೆಲಸಕ್ಕೆ ಸಾಗಾಣಿಕೆ ಮಾಡಿರುವುದರಿಂದ, ಮತ್ತು ಅನಾಮಧೇಯತೆ ಮತ್ತು ಸುರಕ್ಷಿತ ಚಲನಶೀಲತೆಯನ್ನು ಸಾಧ್ಯವಾಗಿಸುವ ಪೂರಕ ವಾತಾವರಣ ನಿರ್ಮಿತವಾಗುತ್ತಿರುವುದರಿಂದ, ಮಹಿಳೆಯರು ಸೆಕ್ಸ್ ವರ್ಕ್ ಅನ್ನು ಬದುಕುಳಿಯುವ ಮಾರ್ಗವಾಗಿ ಮತ್ತು ತಮ್ಮ ಕುಟುಂಬ ಪೋಷಣೆಗಾಗಿ ಆಯ್ಕೆ ಮಾಡಿಕೊಳ್ಳುವಂತಾಗಿದೆ.

**ಸೆಕ್ಸ್ ವರ್ಕ್ ಮತ್ತು ಸಾಗಾಣಿಕೆ ಕಾನೂನಿನ ಚೌಕಟ್ಟಿನಲ್ಲಿ**

ಸಾರ್ವಜನಿಕ ಗ್ರಹಿಕೆ , ಕಾನೂನು, ನೀತಿ ಮತ್ತು ರೂಢಿಯಲ್ಲಿ ಸೆಕ್ಸ್ ವರ್ಕ್ ಮತ್ತು ಸಾಗಣಿಕೆಯನ್ನು ಸಮನ್ವಯಗೊಳಿಸಲಾಗಿದೆ. ಇಲ್ಲಿ ಈ ಅಧ್ಯಯನವು ಸೆಕ್ಸ್ ವರ್ಕ್ ಮತ್ತು ಸಾಗಾಣಿಕೆಯನ್ನು ಉದ್ದೇಶಿಸಲು, ನಮ್ಮ ಪ್ರಾಥಮಿಕ ಶಾಸನವಾದ 'ದಿ ಇಮ್ಮೊರಲ್ ಟ್ರಾಫಿಕ್ಕಿಂಗ್ (ಪ್ರಿವೆಂಶನ್) ಆಕ್ಟ್ 1986 (ITPA) ಹಾಗೂ ಇತರೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕಾನ್ವೆಂಶನ್, ಮತ್ತು ಹೇಗೆ ಸಗಾಣಿಕೆಯ ನಿರ್ವಚನ ನೀಡಿ ಅದನ್ನು ಉದ್ದೇಶಿಸುತ್ತಿರುವ ಬಗೆಯ ಒಂದು ಸ್ಥೂಲ ಚಿತ್ರಣ ನೀಡುವ ಪ್ರಯತ್ನ ಮಾಡಲಾಗಿದೆ. ಇವು UN ಪ್ರೋಟೋಕಾಲ್ಆದ -ವ್ಯಕ್ತಿಗಳ, ವಿಶೇಷವಾಗಿ ಹೆಂಗಸರ ಮತ್ತು ಮಕ್ಕಳ ಸಾಗಾಣಿಕೆಯ ತಡೆಗಟ್ಟುವಿಕೆ, ನಿಗ್ರಹ ಮತ್ತು ಶಿಕ್ಷೆ (2002), ಸಾರ್ಕ್ (SAARC) ನ ಕಾನ್ವೆಂಶನ್ (2002 ರಲ್ಲಿ) -ವೇಶ್ಯಾವಾಟಿಕೆಗೆ ಹೆಂಗಸರ ಮತ್ತು ಮಕ್ಕಳ ಸಾಗಾಣಿಕೆಯನ್ನು ತಡೆಗಟ್ಟುವುದು ಮತ್ತು ಇದರ ವಿರುದ್ಧ ಹೋರಾಡುವುದು. ಭಾರತ ದೇಶದ ಮೇಲೆ ತನ್ನ ಸಾಗಾಣಿಕೆಯ ಕಾನೂನು ಮತ್ತು ನೀತಿಗಳನ್ನು ತಿದ್ದುಪಡಿ ಮಾಡಿಕೊಳ್ಳುವಂತೆ ಒತ್ತಡ ಹಾಕುತ್ತಿರುವ - ಅಮೇರಿಕಾದ ವಾರ್ಷಿಕ 'ಟ್ರಾಫಿಕ್ಕಿಂಗ್ ಇನ್ ಪರ್ಸನ್ಸ್ ವರದಿಯ (TIP ರಿಪೋರ್ಟ್), ಶ್ರೇಯಸ್ಸು ಇವರಿಗೆ ಸಲ್ಲಬೇಕು.

ಭಾರತದ ಕಾನೂನು ನೇರವಾಗಿ ವೇಶ್ಯಾವಾಟಿಕೆಯನ್ನು ಅಪರಾಧೀಕರಣಗೊಳಿಸದೆ ಇರುವುದರಿಂದ, ಅಮೆರಿಕಾದ ಅನುಮೋದನೆಯ ಭಯ ಮತ್ತು ಒತ್ತಡ ಇದ್ದಿದ್ದರಿಂದ 2006 ರಲ್ಲಿ ತನ್ನ ITPA ಕಾಯ್ದೆಗೆ ತಿದ್ದುಪಡಿ ತಂದರು. ಇದರಲ್ಲಿ ಬೇರೆ ಕ್ಷೇತ್ರ/ವಲಯಗಳಲ್ಲಿ ಸಾಗಾಣಿಕೆಯನ್ನು ಪೂರ್ಣವಾಗಿ ಕಡೆಗಾಣಿಸುತ್ತಾ, ಮತ್ತು ಸಾಗಾಣಿಕೆಯಾದ ಕಾರ್ಮಿಕನನ್ನು ಇಟ್ಟುಕೊಂಡ ಮಾಲೀಕರು ಮತ್ತು ಕಂಪೆನಿಗಳನ್ನು ವಿನಹಾಯಿಸಿ ಸೆಕ್ಸ್ ವರ್ಕರ್ಸ್ ಗಳ ಗಿರಾಕಿಗಳನ್ನುಅಪರಾಧಿಗಳನ್ನಾಗಿಸಿತು. ಕಡೆಗೆ ಸೆಕ್ಸ್ ವರ್ಕರ್ಸ್ ಸಂಘಟನೆಗಳ ಮತ್ತು ಆರೋಗ್ಯ ಸಚಿವಾಲಯದ ಒತ್ತಡಕ್ಕೆ ಮಣಿದು ಈ ಬಿಲ್ಲ್ ರದ್ದಾಯಿತಾದರು, ಮೇ 2016 ರಲ್ಲಿ ಮಹಿಳ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು 'ವ್ಯಕ್ತಿಗಳ ಸಾಗಾಣಿಕೆ (ತಡೆಗಟ್ಟುವಿಕೆ, ರಕ್ಷಣೆ ಮತ್ತು ಪುನರ್ವಸತಿ) ಬಿಲ್ಲ್ ಅನ್ನು ದೇಶದ ಮೊತ್ತ ಮೊದಲ ಸಾಗಾಣಿಕೆಯ ವಿರುದ್ಧದ ಕಾನೂನೆಂದು ಮತ್ತು ಇದೇ ಉದ್ದೇಶ ಇರುವ ಎಲ್ಲಾ ಶಾಸನಗಳನ್ನು ಒಂದೆಡೆ ತರುವುದೆಂದು, ಇತರ ವಲಯಗಳಿಗೆ ವಿಸ್ತರಿಸುವಂತೆ ವ್ಯಾಖ್ಯಾನಿಸಿ, ರಕ್ಷಿಸಲ್ಪಟ್ಟವರ ಪುನರ್ವಸತಿಯನ್ನು ಹಕ್ಕಾಗಿ ನೋಡುವಂಥ ಕರುಡು ಬಿಡುಗಡೆ ಮಾಡಿದೆ. ಇದು ಪೋಲೀಸರ ದೌರ್ಜನ್ಯ, ಗಣನೀಯವಾದ ಲೈಂಗಿಕ ಆರೋಗ್ಯದ ರಿಸ್ಕ್,ಲೈಂಗಿಕ ದೌರ್ಜನ್ಯ, ಆರ್ಥಿಕ ಅಭಧ್ರತೆ ಮತ್ತು ಇತರ ಸೆಕ್ಸ್ ವರ್ಕರ್ಸ್ ಸಮಸ್ಯೆಗಳನ್ನು

ಉದ್ದೇಶಿಸುವ ವಿಶಿಷ್ಟ ಅವಕಾಶವನ್ನು ಪ್ರಸ್ತುತಪಡಿಸಿತಾದರೂ, ಸೆಕ್ಸ್ ವರ್ಕರ್ಸ್ ಸಂಘಟನೆಗಳು ಮತ್ತು ಯೂನಿಯನ್ಗಳು ಇದು ಸಾಗಾಣಿಕೆಯನ್ನು ಸಮರ್ಪಕವಾಗಿ ವಿವರಿಸಿಲ್ಲ ಮತ್ತು ಕರುಡು ತಯಾರಿಸುವಾಗ ಸೆಕ್ಸ್ ವರ್ಕರ್ಸ್ ಗಳನ್ನು ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿಲ್ಲವೆಂದು ಕರುಡನ್ನು ತಿರಸ್ಕರಿಸಿದೆ.

**ಪ್ರಮುಖ ಸಂಶೋಧನೆ**

ವಾಂಪ್ (VAMP) ಮತ್ತು ಸಂಗ್ರಾಮ್ ಕೆಲಸವನ್ನು ಕೇಂದ್ರಿತ ಗುಂಪು ಚರ್ಚೆ, ಸಂದರ್ಶನ ಮತ್ತು ಕ್ಷೇತ್ರ ಭೇಟಿಗಳ ಮೂಲಕ, ತಮ್ಮೊಳಗೆ ತಾವು ಸಂಘಟಿತರಾದಾಗ ಸಿಕ್ಕಿದಂತಹ ಲಾಭಗಳು, ತಮಗೆ ಎದುರಾದಂತಹ ಪ್ರಮುಖ ಅಡಚಣೆಗಳು, ತಾವು ಸಾಗಾಣಿಕೆಯನ್ನು ಅರ್ಥ ಮಾಡಿಕೊಂಡದ್ದು ಮತ್ತು ಸ್ಪಂದಿಸಿದ ಬಗೆ, ಮತ್ತು ತಾವುಗಳು ಸರಕಾರಕ್ಕೆ ಸೆಕ್ಸ್ ವರ್ಕ್ ಮತ್ತು ಸಾಗಾಣಿಕೆಯ ಮೇಲೆ ನೀಡಿದಂತಹ ಸಲಹೆಗಳು, ಇವೆಲ್ಲವನ್ನು ವಿವರವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿ.

ವಾಂಪ್ (VAMP) ಮತ್ತು ಸಂಗ್ರಾಮ್ ಪ್ರತಿನಿಧಿಗಳ ಒಟ್ಟಿಗೆ ಚರ್ಚೆ ಮತ್ತು ಸಂದರ್ಶನ ನಡೆಸಿದಾಗ, ಬೆಳಕಿಗೆ ಬಂದ ಅಂಶವೆಂದರೆ, ಪ್ರಾರಂಭದ ದಿನದಿಂದಲೇ ಅವರು ಕಾನೂನಿನಲ್ಲಿ 'ಸಾಗಾಣಿಕೆಯನ್ನು' ವ್ಯಾಖ್ಯಾನಿಸಿ ಹಾಗೆ ಅದರ ಎಲ್ಲಾ ಅಂಶಗಳಿಗೆ ಸ್ಪಂದಿಸುತ್ತಲೇ ಬಂದಿದ್ದಾರೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ವೇಶ್ಯಾವಾಟಿಕೆಗೆ ಬರುವಂತಹ ಅಪ್ರಾಪ್ತರು, ಹೆಂಗಸರ ಇಚ್ಛೆಗೆ ವಿರುದ್ಧವಾಗಿ ಮೋಸದಿಂದ ಅವರನ್ನು ಕರೆತರುವುದನ್ನು , ಘರ್ವಾಲಿಗಳಿಂದ, ಗಿರಾಕಿಗಳಿಂದ ಮತ್ತು ಪಿಂಪ್ ಗಳಿಂದ ಶೋಷಣೆ ಮತ್ತು ಕೆಟ್ಟದಾಗಿ ನಡೆಸಿಕೊಳ್ಳುವುದನ್ನು ಈ ಸಂಘಟನೆಗಳು ಉದ್ದೇಶಿಸುತ್ತಲೇ ಬಂದಿವೆ. ಸಂಗ್ರಾಮ್ ಮೊದಲಿನಿಂದಲೂ ಈ ಕೃತ್ಯಗಳು ಕಾನೂನುಬಾಹಿರವೆಂದು ಸ್ಪಷ್ಟಪಡಿಸಿದೆಯಾದರು, ವಾಂಪ್ ರಚನೆಯಾದ ನಂತರವೇ, ಇದು ಹಿಂಸಾ ಕೃತ್ಯ ವೆಂದು ಅಂತರ್ಗತ ಮಾಡಿಕೊಂಡು ಅದಕ್ಕೆ ತಕ್ಕಹಾಗೆ ಸ್ಪಂದಿಸತೊಡಗಿತು. ಆದರೆ ಈ ಶೋಷಣೆ, ಅನ್ಯಾಯದ ಕೃತ್ಯಗಳನ್ನು ಮಹಿಳೆಯರ ಸ್ವ-ಅರಿವಿನ ಸಮಷ್ಟಿ ನೈತಿಕತೆ ಮತ್ತು ಮೌಲ್ಯಗಳ ನೋಟದ ವ್ಯಾಖ್ಯಾನೆಗಳು, ಇವರನ್ನು ಈ ನೆಲೆಗಟ್ಟಿ ನಲ್ಲೇ ನೋಡಿ 'ಸಾಗಾಣಿಕೆ'ಯನ್ನು ಉದ್ದೇಶಿಸುತ್ತಾರೆಯೇ ಹೊರತು, ಕಾನೂನಿನ ಕಣ್ಣಿನಿಂದಲ್ಲ.

ಸೆಕ್ಸ್ ವರ್ಕ್ ಯೆಂಬುದು ವ್ಯಕ್ತಿಗತ ಆಯ್ಕೆ ಮತ್ತು ಜೀವನೋಪಾಯದ ಹಕ್ಕು ಯೆಂದು ಪುನರುಚ್ಚರಿಸುತ್ತಲೇ, ಸಾಗಾಣಿಕೆಯು ಅಪರಾಧವೆಂದು ನಂಬುತ್ತಾರೆ. ಹಾಗೂ ಸಮುದಾಯದೊಳಗಡೇನೆ ಇದ್ದುಕೊಂಡು ಇದರ ವಿರುದ್ಧ ಹೋರಾಡಲು ಮತ್ತು ಎದುರಿಸಲು ಸಿದ್ಧರಿದ್ದಾರೆ. ಇದನ್ನು ಅವರು ಹಲವಾರು ಸ್ತರದಲ್ಲಿ ಮಾಡುತಲಿದ್ದಾರೆ.

1. **ಭಾವನಾತ್ಮಕವಾಗಲ್ಲದೆ ತಂತ್ರೋಪಾಯದಿಂದ ಕಾನೂನಿನೊಟ್ಟಿಗೆ ವ್ಯವಹರಿಸುವುದು**

ಇವರುಗಳ ಮೇಲೆ 2005ರಲ್ಲಿ ದಾಳಿ ಮತ್ತು ರಕ್ಷಣಾ ಕಾರ್ಯಾಚರಣೆಯ ಪ್ರಭಾವದಿಂದಾಗಿ, ಭಾವನಾತ್ಮಕವಾಗಿ ದುರ್ಬಲಗೊಂಡ ಹಿನ್ನಲೆಯಲ್ಲೇ ವಕೀಲರ ಸಹಾಯದಿಂದ ವ್ಯವಸ್ಥಿತವಾಗಿ ITPA ಯನ್ನು ಇವರಿರುವ ಸನ್ನಿವೇಶದಲ್ಲಿ ಮತ್ತು ನ್ಯಾಯಾಂಗ ಸನ್ನಿವೇಶದಲ್ಲಿ ಅರ್ಥಮಾಡಿಕೊಳ್ಳುವ ಪ್ರಕ್ರಿಯೆ ಯನ್ನು ವಾಂಪ್ ಆರಂಭಿಸಿತು. ಇಲ್ಲಿ ಗಳಿಸಿದ ಅನುಭವದ ಆಧಾರದ ಮೇಲೆ ಇವರುಗಳು ಸೆಕ್ಸ್ ವರ್ಕ್ ನಲ್ಲಿ ಅಪ್ರಾಪ್ತರ ವಿಷಯ; ಮತ್ತು ಘರ್ವಾಲಿಗಳು ಮತ್ತು ದಲ್ಲಾಳಿಗಳಿಂದಾಗಿ ನಡೆಯುವ ಶೋಷಣೆ, ಅದರಲ್ಲೂ ಇತರೆ ರಾಜ್ಯದಿಂದ ಮತ್ತು ದೇಶದಿಂದ ಹೆಚ್ಚುತ್ತಿರುವ ವಲಸಿಗರ ಸಮಸ್ಯೆ ಕುರಿತು ಜಾಗರೂಕರಾಗಿದ್ದಾರೆ. ಸ್ಥಳೀಯವಾಗಿ ಹೊಸದಾಗಿ ಪ್ರವೇಶ ಮಾಡಿದವರ ವಯಸ್ಸು ಮೇಲ್ವಿಚಾರಣೆ ಮಾಡುವುದು ದೈನಂದಿನ ವಾಡಿಕೆಯಾಗಿದೆ, ಅದರಲ್ಲೂ ಸಾಂಗ್ಲಿಯಲ್ಲಿ ಅಪ್ರಾಪ್ತ ವಯಸ್ಸಿನವರೆಂದು ಗುಮಾನಿ ಬಂದರೆ

ಅಲ್ಲೇ ಇರುವ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವಿವಾದಾತ್ಮಕ 'ಮೂಳೆ ಸಾಂದ್ರತೆ' ಪರೀಕ್ಷೆ ಮಾಡಿಸಿ ವಯಸ್ಸು ಖಾತರಿಪದಿಸಿಕೊಳ್ಳುವ ಪರಿಪಾಟ ಬೆಳೆಸಿಕೊಂಡಿದ್ದಾರೆ.

**2. ಹಿಂಸೆ ಯನ್ನು ಎದುರಿಸಲು/ಪುನರ್ವಸತಿಯ ಪರಿಭಾಷೆ ಬದಲಾಯಿಸಲು ಸಮುದಾಯ ಸಂಘಟನೆ ಗಳನ್ನು ಬಲಪಡಿಸುವುದು**

**'ತಂಟ ಮುಕ್ತಿ ಸಮಿತಿ'-TMS**

ವಾಂಪ್ ಸಮುದಾಯವು ಬೆಳೆಯುತ್ತಿದ್ದಹಾಗೆಯೇ, ಸಂಘಟನೆಯು ಅನ್ಯಾಯವನ್ನು ಎದುರಿಸುವ ಪ್ರಯತ್ನಗಳೆಲ್ಲ, ಆಗಾಗ್ಗೆ ಮುಖ್ಯವಾಹಿನಿ ಕೋರ್ಟ್-ಪೋಲಿಸ್ ಪರಿಹರಿಸುವ ಕಾರ್ಯವೈಖರಿ ಯಿಂದಾಗಿ ಹತಾಶರಾಗಿದ್ದರು. ಹಾಗಾಗಿ 'ತಂಟ ಮುಕ್ತಿ ಸಮಿತಿ-TMS (ಘರ್ಷಣೆಗಳನ್ನು ಪರಿಹರಿಸುವ ಸಮಿತಿ)'ಯನ್ನು ಪ್ರಾರಂಭಿಸಿ ಕಲೆಕ್ಟಿವ್ ಎದುರಿಸುತ್ತಿರುವ ಅಂತರಿಕ ಮತ್ತು ಬಾಹ್ಯ ಸಮಸ್ಯೆಗಳಿಗೆ 'ಸಾವಯವ ಸಮುದಾಯ ಪರಿಹಾರಗಳ' ಅನ್ವೇಷಣೆಯಲ್ಲಿ ತೊಡಗಿದೆ. ವಾಂಪ್ ಕೆಲಸ ಮಾಡುವ ಸಮುದಾಯದ ಪ್ರತೀ ಸ್ತರದಲ್ಲಿ ಸಂಘಟನೆ ಕೆಲಸ ಮಾಡುತ್ತದೆ. ಸಂಘಟನೆ ಸಮಿತಿ ಸದಸ್ಯರನ್ನು ನಿರ್ದಿಷ್ಟ ಅವಧಿಗೆ ಆಯ್ಕೆ ಮಾಡಲಾಗುತ್ತದೆ, ಈ ಅವಧಿಯಲ್ಲಿ ಅವರು ನಿಯಮಿತವಾಗಿ ಸಭೆಗಳನ್ನು ಆಯೋಜಿಸುತಾರೆ, ಸ್ಥಳೀಯ ಜಗಳಗಳನ್ನು ಮಧ್ಯಪ್ರವೇಶಿಸಿ ಪರಿಹರಿಸುತ್ತಾರೆ, ಪೋಲಿಸ್ ಕಂಪ್ಲೇಂಟ್ ದಾಖಲಿಸುತ್ತಾರೆ, ಕ್ರೌರ್ಯ ತುಂಬಿದ ಗಿರಾಕಿ/ರೌಡಿಗಳನ್ನು ಪೋಲಿಸ್ ರಿಗೆ ಹಿಡಿದು ಕೊಡುವುದು, ಹಣ ಸಾಲನೀಡುವವರು ಸಮಾನವಾದ ಬಡ್ಡಿ ದರ ಹಾಕುತ್ತಿದ್ದಾರೆಯೇ ಯೆಂದು ನಿಗಾಇಡುತ್ತಾರೆ. ಹೊಸದಾಗಿ ದಂಧೆಗೆ ಬಂದಂತಹವರ ವಯಸ್ಸಿನ ಮೇಲೆ ಕಣ್ಣಿಡುತ್ತಾರೆ, ಅವರು ವಯಸ್ಕರೇ ಮತ್ತು ಅವರ ಇಚ್ಚೆ ಯಿಂದಲೇ ಈ ದಂಧೆ ಮುಂದುವರಿಸುತ್ತಿದ್ದಾರೆಯೆ ಯೆಂದು ಖಾತ್ರಿ ಪಡಿಸಿಕೊಳ್ಳುತ್ತಾರೆ. ಇವರೆಲ್ಲರೂ ಒಟ್ಟಾಗಿ ಕುಳಿತು ಆಂತರಿಕ ಹಿಂಸೆಯನ್ನು ಹೇಗೆ ಪರಿಹರಿಸಿಕೊಳ್ಳಬೇಕು ಮತ್ತು ತಾವುಗಳು ಏನಾದರು ಕಾನೂನು ಉಲ್ಲಂಗನೆ ಮಾಡಿ ಅಪರಾಧಿಗಳಾಗುತ್ತಿದ್ದಾರೆಯೇ ಯೆಂದು ಚರ್ಚಿಸಿ ತಂತ್ರೋಪಾಯಗಳನ್ನು ರೂಪಿಸಿಕೊಳ್ಳುತ್ತಾರೆ. ಉದಾಹರಣೆಗೆ ಹೇಳಬೇಕೆಂದರೆ, ವೇಶ್ಯಾ ಗೃಹದಲ್ಲಿ ವಾಸ ಮಾಡುವ ಮಹಿಳೆಯರನ್ನು, ಘರ್ವಾಲಿಗಳ ಮುಷ್ಠಿಯಿಂದ ಸ್ವತಂತ್ರವಾಗಿ ಒಬ್ಬರೇ ಮನೆ ಮಾಡಿಕೊಂಡು ವಾಸ ಮಾಡಲು ಪ್ರೋತ್ಸಾಹ ನೀಡಲಾಗುತ್ತಾದೆ.

ಹಾಗಾಗಿ ಸಮುದಾಯದವರ ಆತ್ಮ ಸ್ಥೈರ್ಯ ಹೆಚ್ಚಿಸಲು, ಮತ್ತು ಹೊರ ಪ್ರಪಂಚದ ತಾರತಮ್ಯ, ಕಳಂಕ ಇತ್ಯಾದಿಗಳ ಒಟ್ಟಿಗೆ ವ್ಯವಹರಿಸಲು; ಮತ್ತು ತಾವುಗಳು ವಿವಿಧ ರೂಪದ ಅನ್ಯಾಯವನ್ನು ಅರ್ಥೈಸುವ ರೀತಿಯಲ್ಲಿ, ಆಳವಾಗಿ ಚಿಂತನೆ ನಡೆಸಿ ಪರಿಹಾರ ಮಾರ್ಗ ಕಂಡುಕೊಳ್ಳುವಲ್ಲಿ 'ತಂಟ ಮುಕ್ತಿ ಸಮಿತಿ' ಯು ವೇದಿಕೆ ಕಲ್ಪಿಸಿ ಮಹತ್ವದ ಪಾತ್ರ ವಹಿಸುತ್ತದೆ.

**'ಮಿತ್ರ' ಮತ್ತು ಸೆಕ್ಸ್ ವರ್ಕರ್ಸ್ ಮಕ್ಕಳೊಟ್ಟಿಗೆ ಕೆಲಸ ಮಾಡುವುದು**

ವಾಂಪ್ ಆರಂಭಗೊಂಡ ದಿನದಿಂದ ಸೆಕ್ಸ್ ವರ್ಕರ್ಸ್ ಮಕ್ಕಳ ಜೊತೆ, ಅವರ ವಿದ್ಯಾಭ್ಯಾಸ, ಯೋಗಕ್ಷೇಮದ ಕುರಿತಾಗಿ ಕೆಲಸ ಮಾಡುತ್ತಲೇ ಬಂದಿದೆ. ಸಮಾಜದಿಂದ ತಾರತಮ್ಯ ಮತ್ತು ಕಳಂಕಿತರೆಂದು ಕರೆಸಿಕೊಳ್ಳುವ ಈ ಮಹಿಳೆಯರು ಮತ್ತು ಅವರ ಮಕ್ಕಳ ಮೇಲೆ ಆಗುವ ಪರಿಣಾಮದ ಅರಿವು ಇರುವುದರಿಂದ; ಮತ್ತು ಇವುಗಳು ಹೇಗೆ ಮಕ್ಕಳ ಶೈಕ್ಷಣಿಕ ಪ್ರದರ್ಶನದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ, ಆತ್ಮಾಭಿಮಾನ ಮತ್ತು ಪ್ರೇರಣಾ ಶಕ್ತಿಯನ್ನು ಕೆಳಗುಂದಿಸುತ್ತದೆ; ಮತ್ತು ಕಡೆಯದಾಗಿ ಹೇಗೆ ಜೀವನೋಪಾಯಕ್ಕೆ ಇರುವ ಅವಕಾಶಗಳೆಲ್ಲಾ ಕ್ಷೀಣಿಸುತ್ತಿದೆ ಯೆಂದು ತಿಳಿದು, ಮಕ್ಕಳೊಟ್ಟಿಗೆ ಕೆಲಸ ಮಾಡುತ್ತಿದ್ದಾರೆ. 'ಮಿತ್ರ' ಶಾಲಾ ನಂತರದ ಕಾರ್ಯಕ್ರಮವನ್ನು ನಡೆಸುತ್ತದೆ, ಅದರಲ್ಲಿ ಹಿರಿಯ ಮಕ್ಕಳನ್ನು ನಾಯಕರನ್ನಾಗಿ ನೇಮಿಸಿ, ಮಕ್ಕಳಿಗೆ ಅತ್ಯವಶ್ಯಕವಾಗಿರುವ 'ಮೂಲ ಜೀವನ ಕೌಶಲ'ವನ್ನು

ಹೆಚ್ಚುವರಿ ಟ್ಯೂಶನ್ ಮೂಲಕ ಹೇಳಿಕೊಡಲಾಗುತ್ತದೆ. ಇವು ಮಕ್ಕಳಿಗೆ ಒಂದು ಸುರಕ್ಷಿತ ತಾಣವಾಗಿದೆ ಯಾಕೆಂದರೆ ಇಲ್ಲಿ ಮಕ್ಕಳಿಗೆ ಕೇವಲ ಶೈಕ್ಷಣಿಕ ಮಾರ್ಗದರ್ಶನ ಮತ್ತು ಭಾವನಾತ್ಮಕ ಆಸರೆಯಲ್ಲದೆ, ಅವರ ಅಸ್ತಿತ್ವವನ್ನು ಪರೀಕ್ಷಿಸಿಕೊಳ್ಳುತ್ತಾ ತಮ್ಮ ಸ್ವ-ಮೌಲ್ಯ ಮತ್ತು ಘನತೆಯನ್ನು ಪಡೆಯುವ ಮಾರ್ಗ ಶೋಧನೆಗೆ ಅನುವು ಮಾಡಿಕೊಡುತ್ತದೆ.

'ಮಿತ್ರ' ಸದಸ್ಯರು, ತಮ್ಮ ಚಿಕ್ಕ ಮಕ್ಕಳಿಗೆ ಸೆಕ್ಸ್ ವರ್ಕ್ ಅಲ್ಲದೆ ಪರ್ಯಾಯ ಜೀವನೋಪಾಯಕ್ಕೆ ಅವಕಾಶವಿದೆ ಯೆಂದು ಮನಗಂಡು ಹರ್ಷಿತರಾಗಿದ್ದಾರೆ. ತಮ್ಮ ಸ್ವ-ಪುನರ್ವಸತಿಗೆ ಇರುವ ಬದ್ಧತೆಯಿಂದ ಇವರಿಗೆ ಒಂದು ನಂಬಿಕೆಯೆಂದರೆ, ತಮ್ಮ ಮಕ್ಕಳು ತಮ್ಮದೇ ಆದ ಜೀವನೋಪಾಯ ಆಯ್ಕೆ ಮಾಡಿಕೊಂಡು ಅದರಿಂದ ಹಣಗಳಿಸಲು ಪ್ರಾರಂಭಿಸಿದಾಗ, ಮಹಿಳೆಯರು ಸೆಕ್ಸ್ ವರ್ಕ್ ಬಿಡಬೇಕೆನಿಸಿದಾಗ, ಅವರ ಮಕ್ಕಳೊಟ್ಟಿಗೆ ಇದ್ದು ವಾಸ ಮಾಡುವುದೇ ನಿಜವಾದ ಅರ್ಥದಲ್ಲಿ ಪುನರ್ವಸತಿಯೆಂದು ಅನಿಸಿಕೊಳ್ಳುತ್ತದೆ.

**ಮುಂಬರುವ ಪೀಳಿಗೆಗಳಿಗೆ ಆಯ್ಕೆಯನ್ನು ವಿಸ್ತರಿಸುವುದು**

ವಾಂಪ್ ತಮ್ಮ ಬೇರೆ ಬೇರೆ ಪೀಳಿಗೆಯ ಮಹಿಳೆಯರೊಟ್ಟಿಗೆ, ಸಂಘಟನೆ ಕೆಲಸ ಮಾಡಿದ ಅನುಭವದ ಆಧಾರದ ಮೇಲೆ ಹೇಳುವುದಾದರೆ, ತಮ್ಮ ವಾಸ್ತವಿಕತೆಗೆ ಹತ್ತಿರವಾದ ಇನ್ನೂ ಹೆಚ್ಚಿನ ಸುಸ್ಥಿರ ಬದಲಾವಣೆಯ ದೃಷ್ಟಿ ಮತ್ತು ರೂಪಾಂತರಕ್ಕೆ ಅನುವು ಮಾಡಿಕೊಟ್ಟಿದೆ. ವಾಂಪ್ ಸದಸ್ಯರಲ್ಲಿ ಒಂದು ಅಂಶ ಸ್ಪಷ್ಟವಾಗಿ ಕಾಣುವುದೆಂದರೆ, ಇವರುಗಳು ಆಯ್ಕೆ ಮಾಡಿಕೊಂಡ ಬಗ್ಗೆ ತಪ್ಪೊಪ್ಪಿಗೆ ಆಗಲಿ ಅಥವಾ ತಮ್ಮ ಮಗಳು ಮಾಡುವಂತಹ ಆಯ್ಕೆಗಳ ಬಗ್ಗೆ ಜಡ್ಜ್ ಮೆಂಟಲ್ ಆಗಲಿ ಇಲ್ಲದೆ, ತಮ್ಮ ಮಕ್ಕಳ ಬಗ್ಗೆ ಕಾಳಜಿ ತೋರುತ್ತಾರೆ. ಈ ಸೂಕ್ಷ್ಮ ವ್ಯತ್ಯಾಸದ ನಿಲುವೇ, ಸಂಗ್ರಾಮ್ ಮತ್ತು ವಾಂಪ್ ಅನ್ನು ಸೆಕ್ಸ್ ವರ್ಕರ್ಸ್ ಮಕ್ಕಳ ಒಟ್ಟಿಗೆ ಕೆಲಸ ಮಾಡಲು ಮಾರ್ಗದರ್ಶನ ನೀಡಿದೆ ಮತ್ತು ಆತ್ಮ ಗೌರವ, ಆತ್ಮ ವಿಶ್ವಾಸ ಮಾತು ಜ್ಞಾನದ ಸ್ತರಗಳನ್ನು ಹೆಚ್ಚಿಸಲು ಕಾರ್ಯಕ್ರಮಗಳನ್ನು ಅಮಲು ಮಾಡಲು ಸಹಾಯಮಾಡಿದೆ. ಈ ಕಾರ್ಯಕ್ರಮಗಳು ಮಕ್ಕಳ ಜೀವನೋಪಾಯದ ಆಯ್ಕೆಗಳನ್ನು ವಿಸ್ತರಿಸಿದೆ, ಆದರೆ ಸಾಮಾನ್ಯವಾಗಿ ಇರುವ ನೈತಿಕ ನೆಲೆಗಟ್ಟಿನ 'ಇದರಾಚೆನ ಬದುಕು' ಕಾರ್ಯಕ್ರಮಗಳ ಹಾಗೆಯಲ್ಲದೆ, ಯಾವುದೇ ತೀರ್ಪುಮನೋಭಾವನೆ ಮತ್ತು ಅವಮಾನದ ಸೋಂಕು ಇಲ್ಲದೆ ಕೆಲಸಮಾಡುತ್ತಿವೆ.

ಉದಾಹರಣೆಗೆ ಸಮುದಾಯದ ಪ್ರಭಾವದಿಂದಾಗಿ ಪುಟ್ಟ ವಯಸ್ಸಿನ ಹುಡುಗಿಯರನ್ನು 'ದೇವಿಗೆ ಅರ್ಪಿಸುವ' ನೆಪದಲ್ಲಿ 'ದೇವದಾಸಿ' ಯರನ್ನಾಗಿ ಮಾಡುವ ಪದ್ಧತಿಯೂ ಗಣನೀಯ ಮಟ್ಟದಲ್ಲಿ ಕಡಿಮೆಯಾಗಿದೆ. ಬಹಳಷ್ಟು ದೇವದಾಸಿಯರು ತಮ್ಮ ಮಕ್ಕಳನ್ನು ದೇವಿಗೆ ಅರ್ಪಿಸದೆ, ಪರ್ಯಾಯ ವೃತ್ತಿಗಾಗಿ ಶಿಕ್ಷಣ ಕೊಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಆದರೆ ಇದು ಅಷ್ಟು ಸುಲಭದ ಪ್ರಯಾಣವಾಗಿರಲಿಲ್ಲ.

**3. ಅಧಿಕಾರ ವರ್ಗದವರ ಒಟ್ಟಿಗೆ ಒಂದು ನಾಜೂಕಿನ ಒಮ್ಮತವನ್ನು ಏರ್ಪಡಿಸುವುದು**

ಸುಮಾರು 1990ರ ನಂತರ ಸಾಮೂಹಿಕ ರೈಡ್ ಒಳಗೊಂಡಂತೆ ಪೋಲಿಸ್ ದೌರ್ಜನ್ಯ ಕಡಿಮೆಯಾಗಿದೆ ಯೆಂದು ಭಾಗವಹಿಸಿದವರೆಲ್ಲರ ಒಮ್ಮತದ ಅಭಿಪ್ರಾಯವಾಗಿತ್ತು. ಇದನ್ನು ನಾವು ಆರಂಭದ ದಿನಗಳಲ್ಲಿ ಪೋಲೀಸರ ವರ್ತನೆ ಮತ್ತು ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ಉದ್ದೇಶಿಸಿ ಅಪಾರ ಪ್ರಮಾಣದ ಕೆಲಸ ಮಾಡಿರುವುದಕ್ಕೆ ಶ್ರೇಯಸ್ಸು ನೀಡಬಹುದು. ಸಂಗ್ರಾಮ್ ಮತ್ತು ವಾಂಪ್ ಸ್ಥಳೀಯ ಸ್ತರದಿಂದ ಹಿಡಿದು ಜಿಲ್ಲಾ, ರಾಜ್ಯ, ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಅಡ್ವೊಕೆಸಿ, ಲಾಬಿ, ಸಂವೇದನಾ ಕಾರ್ಯಕ್ರಮಗಳು ಮತ್ತು ಕಾನೂನು ಶಿಕ್ಷಣದ ಕುರಿತು ಕೆಲಸ ಮಾಡಿದೆ. ಇದರ ಪರಿಣಾಮವಾಗಿ ಪೋಲಿಸರಿಂದು ಕಾನೂನಿನ

ಸೂಕ್ಷ್ಮತೆಯ ಬಗ್ಗೆ ಅರಿವು ಹೆಚ್ಚಿಸಿ ಕೊಂಡಿದ್ದಾರೆ ಮತ್ತು ಸಮುದಾಯದವರು ಆಂತರಿಕ ಹಿಂಸೆಯನ್ನು ಉದ್ದೇಶಿಸುವ ರೀತಿಯ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಸ್ವಲ್ಪ ಅನ್easy ಅನಿಸಿದರೂ ಸಾಕಷ್ಟು ಸ್ಥಿರವಾದ ಕಾರ್ಯ ಸಂಬಂಧವನ್ನು ಪೋಲಿಸರೊಟ್ಟಿಗೆ ವಾಂಪ್ ಸಂಸ್ಥೆಯು ಹೊಂದಿದೆ.

4. **ಸೆಕ್ಸ್ ವರ್ಕ್ ಮತ್ತು ಸಾಗಾಣಿಕೆ ನಡುವೆ ಇರುವ ವ್ಯತ್ಯಾಸ, ಮತ್ತು ಸಾಗಾಣಿಕೆ ಮತ್ತು ಅಸುರಕ್ಷಿತ ವಲಸೆ –ಈ ಪ್ರಮುಖ ಅಂಶಗಳನ್ನು ಅಡ್ವೋಕಸಿ (ಪ್ರಚಾರ) ಮಾಡುವುದು**

ತಮ್ಮ ವಿಸ್ತೃತ ನೆಟ್ವರ್ಕ್ಗಳಾದ 'ನ್ಯಾಷನಲ್ ನೆಟ್ವರ್ಕ್ ಆಫ್ ಸೆಕ್ಸ್ ವರ್ಕರ್ಸ್ (NNSW), ಏಷ್ಯಾ ಪೆಸಿಫಿಕ್ ನೆಟ್ವರ್ಕ್ ಆಫ್ ಸೆಕ್ಸ್ ವರ್ಕರ್ಸ್ (APNSW), ಗ್ಲೋಬಲ್ ನೆಟ್ವರ್ಕ್ ಆಫ್ ಸೆಕ್ಸ್ ವರ್ಕ್ ಪ್ರಾಜೆಕ್ಟ್ಸ್ (NSWP)ಗಳ ಮೂಲಕ, ಸಂಗ್ರಾಮ್ ಮತ್ತು ವಾಂಪ್ ಸ್ಥಳೀಯ ಸ್ತರದಿಂದ ಹಿಡಿದು ಜಿಲ್ಲಾ, ರಾಜ್ಯ, ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಅಡ್ವೋಕಸಿ, ಲಾಬಿಯಲ್ಲಿ ತೊಡಗಿದೆ. ಈ ವೇದಿಕೆಗಳ ಮೂಲಕ ಸೆಕ್ಸ್ ವರ್ಕ್ ಮತ್ತು; ಸಾಗಾಣಿಕೆ, ಮಾನವ ಸಾಗಾಣಿಕೆ ಮತ್ತು ಸ್ವ-ಇಚ್ಚೆಯಿಂದ ಸೆಕ್ಸ್ ಉದ್ಯಮಕ್ಕೆ ಬರುವ ಮಹಿಳೆಯರ ನಡುವಣ ವ್ಯತ್ಯಾಸ, ಅನಿಯಮಿತ ವಲಸೆಗಳ ಬಗ್ಗೆ ಒತ್ತು ಕೊಟ್ಟು ವಿವರಿಸುತ್ತಾರೆ. 'ನಾವಿಲ್ಲದೆ, ನಮ್ಮ ಬಗ್ಗೆ ಇಲ್ಲ' ಎಂಬ ಮೂಲಭೂತ ಸಿದ್ಧಾಂತದ ಆಧಾರದ ಮೇಲೆ,ಸೆಕ್ಸ್ ವರ್ಕರ್ಸ್ ಅನುಭವ ಮತ್ತು ಅವರ ದೃಷ್ಟಿಕೋನವನ್ನು ಸಾಗಾಣಿಕೆಯ ಚರ್ಚೆಗಳಲ್ಲಿ ತರಬೇಕೆಂದು ಅಡ್ವೋಕಸಿಗೆ ಅನುಕೂಲ ಮಾಡಿಕೊಡುತ್ತದೆ.

ಈಗ ಪ್ರಸ್ತುತ ವಾಂಪ್ ಮತ್ತು ಸಂಗ್ರಾಮ್ ತಮ್ಮ ರಾಷ್ಟ್ರೀಯ ನೆಟ್ವರ್ಕ್ ಗಳ ಮೂಲಕ 'ಟ್ರಾಫಿಕ್ಕಿಂಗ್ಆಫ್ ಪೆರ್ಸನ್ಸ್ ಬಿಲ್ಲ್ 2016ರ ಕುಂದುಗಳನ್ನು ತೀಕ್ಷ್ಣವಾಗಿ ಮತ್ತು ವ್ಯಾಪಕವಾಗಿ ಅಡ್ವೋಕಸಿ ಮಾಡುತ್ತಿದೆ.

**ಶಿಫಾರಸ್ಸು**

ವಾಂಪ್ ಹಲವಾರು ಸಂಘಟನೆಗಳನ್ನು ಒಳಗೊಂಡ 'ನ್ಯಾಷನಲ್ ನೆಟ್ವರ್ಕ್ ಆಫ್ ಸೆಕ್ಸ್ ವರ್ಕರ್ಸ್ (NNSW) ಜೊತೆ ಸೇರಿ ಸಾಗಾಣಿಕೆಯ ಬಗ್ಗೆ ಶಿಫಾರಸ್ಸು ಈ ಕೆಳಕಂಡಂತಿವೆ. ಇದರಲ್ಲಿ ಇರುವ ಹೆಚ್ಚಿನ ಅಂಶಗಳೆಲ್ಲ 'ಮಹಿಳೆಯರ ವಿರುದ್ಧ ದೌರ್ಜನ್ಯದ UN ಸ್ಪೆಷಲ್ ರಪ್ಪೋರ್ಟಿಯರ್' ಭಾರತಕ್ಕೆ ಏಪ್ರಿಲ್ 2013 ಭೇಟಿಯಲ್ಲಿ ನೀಡಿದವಾಗಿವೆ.

**ಭಾರತ ಸರ್ಕಾರಕ್ಕೆ**

1. ಸಾಗಾಣಿಕೆ ಮತ್ತು ಎಲ್ಲಾ ರೂಪದ ಶೋಷಣೆಯ ವಿರುದ್ಧ ಕಾನೂನಿನನ್ವಯ ಸಹಾಯ ಮಾಡಲು ಸೆಕ್ಸ್ ವರ್ಕರ್ಸ್ ಗಳ ಸೆಕ್ಸ್ ವರ್ಕ್ ಅನ್ನು ನಿರಪರಾಧೀಕರಣ ಮಾಡಿ.
2. ಸಾಗಾಣಿಕೆ ಅನ್ನುವುದು ಕ್ರಿಮಿನಲ್ ಅಪರಾಧ ಇದನ್ನು ಸೆಕ್ಸ್ ವರ್ಕ್ ಜೊತೆಗೆ ಸಮನ್ವಯ ಮಾಡಬೇಡಿ. ಮಕ್ಕಳಿಗೆ ನ್ಯಾಯ ಸಿಗಲೆಂದು ಮತ್ತು ಸಮ್ಮತಿಸಿದ ವಯಸ್ಕರನ್ನು ಶಿಶುಗಳಾಗಿ ನೋಡದೆ ಇರಲು, ವಯಸ್ಕರ ಸಾಗಾಣಿಕೆ ಮತ್ತು ಮಕ್ಕಳ ಸಾಗಾಣಿಕೆ, ಇವು ಎರಡನ್ನು ಬೇರೆ ಬೇರೆ ಕಾನೂನಿನ ಮೂಲಕ ವ್ಯವಹರಿಸಿ.
3. ಸಮ್ಮತಿ ಸೂಚಿಸಿದ ವಯಸ್ಕರು ಸೆಕ್ಸ್ ಅನ್ನು ಮಾರುವುದಾಗಲಿ ಅಥವಾ ಕೊಳ್ಳುವುದಾಗಲಿ-ನಿರ್ಬಂಧಿಸುವ ಕಾನೂನನ್ನು ರದ್ದುಗೊಳಿಸಿ; ಹಾಗೂ ಕಮರ್ಷಿಯಲ್ ಸೆಕ್ಸ್ ವರ್ಕ್ ಅನ್ನು ನಿರ್ಬಂಧಿಸುವಂಥ ಕನೂನುಗಳಾದ 'ಅನೈತಿಕ' ಗಳಿಕೆ, ಬ್ರೋಥೆಲ್

ಮತ್ತು ವೇಶ್ಯಾ ಗೃಹಗಳು 'ಗಳಿಕೆಯ ಮೇಲೆ ಜೀವನ ನಡೆಸುವುದು' ಇತ್ಯಾದಿ ಕಾನೂನನ್ನು ರದ್ದು ಗೊಳಿಸಿ. ಸೆಕ್ಸ್ ವರ್ಕರ್ಸ್ ಗಳಿಗೆ ಸುರಕ್ಷಿತವಾದ 'ಕೆಲಸದ ಸ್ಥಿತಿ' ಯನ್ನು ಕಲ್ಪಿಸಲು ಪೂರಕವಾದ ಕಾನೂನು ಕ್ರಮ ಕೈಗೊಳ್ಳಿ.

4. ಸೆಕ್ಸ್ ವೊರ್ಕ್ನಲ್ಲಿ ತೊಡಗಿರುವ ವ್ಯಕ್ತಿಗಳು ಮತ್ತು ಲೈಂಗಿಕವಾಗಿ ಶೋಷಿತರದಾದ ಮಕ್ಕಳ ಕಡ್ಡಾಯ ಬಂಧನ ಮತ್ತು ಪುನರ್ವಸತಿ ಕೇಂದ್ರಗಳನ್ನು ಮುಚ್ಚುವುದು. ಇದರ ಬದಲಾಗಿ ಸೆಕ್ಸ್ ವರ್ಕರ್ಸ್ ಗಳಿಗೆ ಸಾಕ್ಷಿ ಆಧಾರಿತ, ಸ್ವಯಂಪ್ರೇರಿತ, ಸಮುದಾಯ ಸಶಕ್ತೀಕರಣ ಸೇವೆಗಳನ್ನು ಒದಗಿಸಿ. ಮಗುವಿನ ಉತ್ತಮ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು, ಲೈಂಗಿಕವಾಗಿ ಶೋಷಿತರಾದ ಮಕ್ಕಳಿಗೆ ಸುರಕ್ಷಿತ-ಸಶಕ್ತ ಕುಟುಂಬದ ವಾತಾವರಣ ಕಲ್ಪಿಸಿ.
5. ಲೈಂಗಿಕ ಶೋಷಣೆಗೆ ಸಾಗಾಣಿಕೆಯಾಗುವುದಕ್ಕೆ ಪ್ರಾಥಮಿಕ ಮತ್ತು ಒಂದೇ ಪ್ರತಿಕ್ರಿಯೆ ಯೆಂದರೆ ರೈಡ್, ಕಾಪಾಡುವುದು, ವಾಪಸಾತಿ ಮತ್ತು ಪುನರ್ವಸತಿ ನೀತಿಯನ್ನು ಪುನರ್ವಿಮರ್ಶಿಸಿ. ಸಾಲದ ಸುಳಿಯಿಂದ ಬಿಡುಗಡೆ ಮಾಡಲು, ಸಾಗಾಣಿಕೆಯಾಗಿ ಬದುಕುಳಿದವರಿಗೆ ಬೆಂಬಲ ನೀಡಬೇಕಾದರೆ ಅವರ ಕುಟುಂಬವನ್ನು ಸಾಲ ಚಕ್ರದಿಂದ ಬಿಡಿಸುವಂಥ ಯೋಜನೆಗಳು, ಬಡತನ ಮತ್ತು ಎಲ್ಲಾ ರೀತಿಯ ಶೋಷಿತ –ಬಲಾತ್ಕಾರದ ದುಡಿಮೆಗೆ ಹೋಗುವಂಥ ಅಪಾಯದಿಂದ ಪಾರು ಮಾಡಲು 'ಸಾಫ್ಟ್ ಲೋನ್'ಗಳನ್ನು ನೀಡಬೇಕು.
6. ಎಲ್ಲಾ ವಲಸಿಗ ಕಾರ್ಮಿಕರು ಮತ್ತು ಅವರ ಕುಟುಂಬದ ಸದಸ್ಯರ ಹಕ್ಕುಗಳ ರಕ್ಷಣೆ 'ಅಂತರರಾಷ್ಟ್ರೀಯ ಕನ್ವೆನ್ಶನ್ ಅನ್ನು ಅಂಗೀಕರಿಸಿ, ಮತ್ತು ಗಡಿಯಿಂದಾಚೆಗೆ ಕೆಲಸಕ್ಕೆ ಬರುವ ಮಹಿಳೆಯರ ಮಾನವ ಹಕ್ಕಿನ ರಕ್ಷಣೆ ಖಚಿತಪಡಿಸಲು-ವಲಸಿಗ ಕಾರ್ಮಿಕರ ಸಂಬಂಧಿತ ILO ಕನ್ವೆನ್ಶನ್ ಅಂಗೀಕರಿಸಿ.

**ನ್ಯಾಯಾಂಗ ಅಧಿಕಾರಿಗಳಿಗೆ**

1. ಸಾಗಾಣಿಕೆ-ವಿರುದ್ಧದ ಕಾನೂನುಗಳನ್ನು ಲೈಂಗಿಕ ಶೋಷಣೆಯನ್ನು ನಿರ್ಬಂಧಮಾಡಲು ಬಳಸಬೇಕು, ಇದನ್ನು ಇಚ್ಛೆ ಪಟ್ಟು ಸೆಕ್ಸ್ ವರ್ಕ್ ಮಾಡುವ ವಯಸ್ಕರ ವಿರುದ್ಧ ಬಳಸಬಾರದು.
2. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಶೋಷಣೆಯ ಕಾನೂನನ್ನು ಜಾರಿಗೆ ತನ್ನಿ, ಆದರೆ ಸಮ್ಮತಿಸಿದ ಸೆಕ್ಸ್ ವರ್ಕರ್ಸ್ ಅನ್ನು ಇದರಿಂದ ಹೊರತಾಗಿ ನೋಡಬೇಕು.
3. ಸಿವಿಲ್ ಮತ್ತು ಆಡಳಿತಾತ್ಮಕ ಅಪರಾಧಗಳಾದ 'ಉದ್ದೇಶವಿಲ್ಲದೆ ಅಲೆಯುವುದು', 'ಸಾರ್ವಜನಿಕ ಉಪದ್ರವ', 'ಸಾರ್ವಜನಿಕ ನೈತಿಕತೆ' ಎಂಬಿತ್ಯಾದಿ ಪ್ರಸ್ತುತ ಇರುವುದನ್ನು ಸೆಕ್ಸ್ ವರ್ಕರ್ಸ್ ಅನ್ನು ಅಪರಾಧಿಗಳನ್ನಾಗಿ ಮಾಡಲು ಉಪಯೋಗಿಸಬಾರದು.
4. ಜಸ್ಟಿಸ್ ವರ್ಮ ಕಮಿಷನ್ ಉದ್ದೇಶಿಸಿದ ಸೆಕ್ಷನ್ 370 IPC ಯ ಸ್ಫೂರ್ತಿಯಲ್ಲೇ ಬಳಸಬೇಕು. ಇದನ್ನು ಬೇರೆ ರೀತಿಯಾಗಿ ಇಚ್ಛಿತ ವಯಸ್ಕ ಸೆಕ್ಸ್ ವರ್ಕರ್ಸ್ ಮತ್ತವರ ಗಿರಾಕಿಗಳನ್ನು ಕಿರುಕುಳ ನೀಡಲು ಬಳಸಬಾರದು.
5. ಸೆಕ್ಷನ್ 370 IPC ಯನ್ನು ಸೆಕ್ಸ್ ವರ್ಕರ್ಸ್ ಗಳ ವಯಸ್ಕ (ಕ್ಲೈಂಟ್) ಗಿರಾಕಿಗಳ ಮೇಲೆ ಬಳಸಬಾರದು.

**ದಾನಿಗಳಿಗೆ**

1. ಸಾಗಾಣಿಕೆ-ವಿರುದ್ಧದ ಪಾಲಿಸಿಗಳು ಹೇಗೆ ಸೆಕ್ಸ್ ವರ್ಕರ್ಸ್ ಗಳ ಜೀವನದ ಮೇಲೆ ಪರಿಣಾಮ ಬೀರುತ್ತಿರುವುದನ್ನು ಸೆಕ್ಸ್ ವರ್ಕರ್ಸ್ ಸಮುದಾಯದವು ಡೇಟಾ ಸಂಗ್ರಹಣೆ ಮತ್ತು ಸಂಶೋಧನೆ ನಡೆಸಲು ಸಹಾಯ ಒದಗಿಸಬೇಕು. ಸೆಕ್ಸ್ ಉದ್ಯಮದಲ್ಲಿ ಇರುವ ಶೋಷಣೆ ಮತ್ತು ದಬ್ಬಾಳಿಕೆಯ ವಿರುದ್ಧ ಹೇಗೆ ಸೆಕ್ಸ್ ವರ್ಕರ್ಸ್ ಸಮುದಾಯವು ಹೋರಾಡುತ್ತಿದೆಯೆಂದು ಕೇಸ್ ಸ್ಟಡಿಯನ್ನು ದಾಖಲಿಸಬೇಕು

2. ಒಂದು ಕಾರ್ಯ ತಂತ್ರವಾಗಿ ಸೆಕ್ಸ್ ವರ್ಕರ್ಸ್ ಸಮುದಾಯವನ್ನು ಮತ್ತು ನೆಟ್ವರ್ಕ್ ಗಳನ್ನು ಬಲಪಡಿಸಲು ಮತ್ತು, ಸಾಗಾಣಿಕೆ ಮತ್ತು ಲೈಂಗಿಕ ಶೋಷಣೆಯ ವಿರುದ್ಧ ಹೋರಾಡಲು ನಾಯಕತ್ವ ಬೆಳೆಸಲು ದೀರ್ಘಾವಧಿ ಸಹಾಯ ಖಾತ್ರಿಪಡಿಸಬೇಕು.

3. ಗ್ರಾಂಟಿ(grantee)ಗಳು ಮಾನವ ಹಕ್ಕುಗಳ ಚೌಕಟ್ಟಿಗೆ ಅಕೌಂಟ್‌ಏಬಲ್ (ಜವಾಬ್ದಾರಿತನ) ಆಗಿರಬೇಕೆಂದು ಖಾತ್ರಿಪಡಿಸಿ. ನೀಡುವಂಥ ದಾನವನ್ನು ಯಾವುದೇ ಬಲವಂತದ ರೈಡ್, ಒಪ್ಪಿತ ವಯಸ್ಕ ಸೆಕ್ಸ್ ವರ್ಕರ್ಸ್ ಅನ್ನು ಅವರ ಇಚ್ಛೆಗೆ ವಿರುದ್ಧವಾಗಿ ಗೃಹಬಂಧನದಲ್ಲಿ ಇಡುವುದು ಮಾನವ ಹಕ್ಕುಗಳ ಉಲ್ಲಂಗನೆಯಾಗುತ್ತದೆ ಆದ್ದರಿಂದ ಇಂತಹ ಕೆಲಸಗಳಿಗೆ ಬಳಸದೆ ಇರುವಹಾಗೆ ಎಲ್ಲಾ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು.

**ಸಮಾರೋಪ (ಕೊನೆಯದಾಗಿ)**

ಸಂಘಟಿಸುವಿಕೆ ಮತ್ತು ಸ್ವಯಂ-ಸಂಘಟಿತರಾಗುವ ಈ ಕಂಪನಶೀಲ (ರೋಮಾಂಚಕ) ಪ್ರಕ್ರಿಯೆಯು, ಕಳಂಕಿತ ಮತ್ತು ಅಂಚಿಗೆ ತಳ್ಳಲ್ಪಟ್ಟ ಸಮುದಾಯವನ್ನು ಕೇಂದ್ರ ಸ್ಥಾನದಲ್ಲಿ ಇಟ್ಟು, ಪ್ರಬಲವಾದ ನೈತಿಕ ಮತ್ತು ಕಾನೂನಿನ ಆಳ್ವಿಕೆಯು ಸೆಕ್ಸ್ ವರ್ಕ್ ಅನ್ನು ಸಾಗಾಣಿಕೆಯೊಟ್ಟಿಗೆ ಸಮನ್ವಯಗೊಳಿಸುತ್ತ, ಐತಿಹಾಸಿಕವಾಗಿ ಈ ಬೈನರಿಯಾದ ಸಾಗಾಣಿಕೆಯಾದವರು ಮತ್ತು ಸಾಗಾಣಿಕೆಮಾಡುವವರು; 'ಬಲಿಪಶು' ಮತ್ತು 'ಮಾಯಗಾತಿ' ಯ ಒಟ್ಟಿಗೆ ಬಂಧಿತವಾಗಿರಿಸುವ ಪ್ರಕ್ರಿಯೆಯನ್ನು ಸವಾಲೊಡ್ಡುವ ರೀತಿಗಳನ್ನು ಈ ಅಧ್ಯಯನದ ಮೂಲಕ ಕೆಲವು ಅಮೂಲ್ಯವಾದ ಸೂಕ್ಷ್ಮ ಒಳಹುಗಳ ಮೇಲೆ ಬೆಳಕುಚಲ್ಲಿವೆ.. ಈ ಬೈನರಿಯನ್ನು ಮುರಿಯುತ್ತಾ ತಮ್ಮ ಘನತೆ, ಸ್ವಂತ ವಾಸ್ತವಿಕತೆಯನ್ನು ವ್ಯಾಖ್ಯಾನಿಸುತ್ತಾ, ಹಕ್ಕುಗಳು ಮತ್ತು ಗಮ್ಯಗಳನ್ನು ಮರು ವಶಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆ, ಕಡ್ಡಾಯವಾಗಿ ಕಾರ್ಯಯೋಜನೆ ಮತ್ತು ಶಿಕ್ಷಣಶಾಸ್ತ್ರದಲ್ಲಿ ಸೇರ್ಪಡೆ ಆಗುತ್ತದೆ.

ಹಿಂಸೆ, ಕೆಲಸ, ಜೀವನೋಪಾಯ ಮತ್ತು ಪುನರ್ವಸತಿಯನ್ನು ತಮ್ಮದೇ ಶರತ್ತಿನ ಮೇಲೆ, ತಮ್ಮ ನೆಲೆಗಟ್ಟಿನಲ್ಲಿ ವ್ಯಾಖ್ಯಾನಿಸುತ್ತಾ, ಅನ್ಯಾಯ ಮತ್ತು ಹಿಂಸೆಯ ಮೂಲವನ್ನೇ ಪ್ರಶ್ನಿಸುವ; ಹಾಗೂ ಜೊತೆಯಲ್ಲಿಯೇ ಸೆಕ್ಸ್ ವರ್ಕ್ ಮತ್ತು ಸಾಗಾಣಿಕೆಯನ್ನು ಮರುವ್ಯಾಖ್ಯಾನಿಸಿ, ನೈತಿಕ ಮತ್ತು ಕಾನೂನಿನ ಚೌಕಟ್ಟನ್ನು ವಿಸ್ತರಿಸಲು ಸಾಧ್ಯವಾಗಿದೆ. ಒಂದಂತು ಸ್ಪಷ್ಟವಾಗಿ ಹೊರಬಂದ ಅಂಶವೆಂದರೆ, ಸ್ವ-ಸಂಘಟನೆಯಿಂದಾಗಿ, ಸಮಾಜದ ಪೊಳ್ಳು ನೈತಿಕ ಹೊರೆಯ ಹೊರತಾಗಿ ಕೂಡ, ಮನೋಸ್ಥೈರ್ಯ ಹೆಚ್ಚಿಸಿಕೊಂಡು ಎಲ್ಲಾ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಹೊಂದಿಸಿಕೊಳ್ಳುತ್ತಿದ್ದಾರೆ.

**ಮಿತಿಗಳು**

ಈ ಅಧ್ಯಯನವು ಪ್ರಾಥಮಿಕವಾಗಿ ಬ್ರೋಥೆಲ್ ಆಧಾರಿತ ಸಾಂಸ್ಥಿಕ ವ್ಯವಸ್ಥೆಯಾದ ಸ್ವ-ಸಂಘಟಿತ ಮಹಿಳೆಯರ ಜೊತೆಗಿನ ಅಧ್ಯಯನವಾಗಿದೆ. ಇದು ಮಹಾರಾಷ್ಟ್ರದ ಸಾಂಗ್ಲಿ/ಮಿರಾಜ್ ಎಂಬ ಪ್ರಾಂತ್ಯದ, ತನ್ನದೇ ಆದಂತಹ ಐತಿಹ್ಯವಿರುವ ಸ್ಥಳದಲ್ಲಿ ನಡೆಸಲಾಗಿದೆ. ಇದು ಒಂದು ಸಂಘಟನೆಯ ಕಾರ್ಯವೈಖರಿಯನ್ನು ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ಕೇಂದ್ರಿಕರಿಸಿದ್ದಾಗಿತ್ತು ಹೊರತು ಇದನ್ನು ಎಲ್ಲಾ ಸನ್ನಿವೇಶದಲ್ಲಿ, ಬೀದಿ ಸ್ತರದಲ್ಲಿ, ದೊಡ್ಡ ನಗರಗಳಾದ ಕಲ್ಕತ್ತಾ, ಮುಂಬೈ ದಂತಹ ಬ್ರೋಥೆಲ್, ಅಸಂಘಟಿತ ಕಾರ್ಮಿಕರೊಟ್ಟಿಗೆ ಸಾಮಾನ್ಯೀಕರಿಸಿ ನೋಡಬಾರದು. ಆದರೂ ಇವರುಗಳ ಹೋರಾಟ ಮತ್ತು ಕಾರ್ಯತಂತ್ರಗಳಿಂದ ಪಾಠ ಕಲಿಯಬಹುದು.